ವಿಚ್ಛೇದನ ಕೊಡುತ್ತಾನೆ.

ಸಾಮಾನ್ಯವಾಗಿ ಬಹುತೇಕ ಕಥೆಗಳು, ‘ಪ್ರೇಮಿಗಳು ಮದುವೆಯಾದರು, ನಂತರ ಸುಖ ಸಂತೋಷದಿಂದ ಬದುಕಿದ್ದರು’ ಎಂಬಲ್ಲಿಗೆ ಮುಗಿಯುತ್ತವೆ. ಆದರೆ ಲಿವಿಯಾ ಕಥೆ ಶುರುವಾಗುವುದೇ ಇಲ್ಲಿಂದ.

ಪ್ರೀತಿಯ ಲಿವಿಯಾಳಿಗೆ ಮದುವೆಯ ಉಡುಗೊರೆಯೆಂಬಂತೆ ಆಗಸ್ಟಸ್ ಸಾಮ್ರಾಜ್ಞಿಯ ಪಟ್ಟ ಮುಡಿಗಿರಿಸುತ್ತಾನೆ. ಆ ನಂತರ ಇಬ್ಬರಿಗೂ ಮಕ್ಕಳಾಗುವುದಿಲ್ಲ. ಇವರಿಬ್ಬರೂ ಮದುವೆಯಾಗುವಾಗ ಲಿವಿಯಾಳ ಗರ್ಭದಲ್ಲಿದ್ದ ಮಗು ಆಗಸ್ಟಸ್‌ನದ್ದೇ ಎಂಬ ಅಭಿಪ್ರಾಯವೂ ಇದೆ. ಆದರೆ ಇತಿಹಾಸ ಮಾತ್ರ ಆಗಸ್ಟಸ್‌ನ ಸಂತಾನ ಎಂದರೆ ಜೂಲಿಯಾ ಮಾತ್ರ ಎಂದು ದಾಖಲಿಸುತ್ತದೆ. ಹಾಗಾಗಿಯೇ ಲಿವಿಯಾಳ ಇಬ್ಬರು ಗಂಡುಮಕ್ಕಳು ಹಲವು ವರ್ಷಗಳ ಕಾಲ ತಮ್ಮ ಮೊದಲ ತಂದೆಯ ಬಳಿಯಲ್ಲಿ ಬೆಳೆಯುತ್ತವೆ. ಆಗಸ್ಟಸ್‌ನಿಗೆ ಲಿವಿಯಾಳ ಮೇಲಿದ್ದ ಪ್ರೀತಿ ಆಕೆಯ ಇಬ್ಬರು ಗಂಡುಮಕ್ಕಳ ಮೇಲಿರಲಿಲ್ಲ. ತನ್ನ ಏಕಮಾತ್ರ ಸಂತಾನ ಜೂಲಿಯಾಳ ಮೂಲಕ ತನ್ನ ರಕ್ತವೇ ತನ್ನ ಉತ್ತರಾಧಿಕಾರಿಯಾಗಬೇಕು ಎಂಬ ಆಸೆ ಇತ್ತು. ಆದರೆ ಲಿವಿಯಾ ಡ್ರುಸೆಲ್ಲಾ ಮಾತ್ರ ತನ್ನ ಮಗನೇ ಮುಂದಿನ ಸಾಮ್ರಾಟ ಎಂಬ ಜಿದ್ದಿಗೆ ಬೀಳುತ್ತಾಳೆ. ಅಲ್ಲಿಂದ ಲಿವಿಯಾಳ ಬದುಕಿನ ರಮ್ಯಪ್ರೇಮದ ಅಧ್ಯಾಯ ಮುಗಿದು ಅಧಿಕಾರ ದಾಹದ ರಕ್ತಸಿಕ್ತ ಅಧ್ಯಾಯ ಶುರುವಾಗುತ್ತದೆ.

## ಸಂಚಿನ ಸೂತ್ರಧಾರಿ

ಲಿವಿಯಾ, ಆಗಸ್ಟಸ್‌ನ ಎದುರು ಸಿಡಿದು ನಿಲ್ಲಲಿಲ್ಲ. ಅವನ ನಿರ್ಧಾರಗಳನ್ನು ಎದುರು ನಿಂತು ವಿರೋಧಿಸಲೂ ಇಲ್ಲ. ಆದರೆ ತನಗೇನು ಬೇಕೋ ಅದನ್ನು ಹಿಂಬಾಗಿಲಿನಿಂದ ಮಾಡಲು ಹಿಂಜರಿಯಲೂ ಇಲ್ಲ. ತನ್ನ ಉದ್ದೇಶ ಸಾಧನೆಗೆ ನಡೆದ ಹಲವು ಕೊಲೆಗಳನ್ನು ‘ಸಹಜ ಸಾವುಗಳು’ ಎಂದು ಬಿಂಬಿಸುವಲ್ಲಿ ಸಫಲಳಾದಳು. ಪರೋಕ್ಷವಾಗಿ ಸಾಮ್ರಾಟನ ನಿರ್ಧಾರಗಳನ್ನು ಪ್ರಭಾವಿಸಿದಳು. ತನ್ನ ಕಾರ್ಯಸಾಧನೆಗೆ ಸಹಾಯವಾಗುವ ನಿರ್ಧಾರಗಳನ್ನು ಆಗಸ್ಟಸ್ ತೆಗೆದುಕೊಳ್ಳುವ ಸಂದರ್ಭವನ್ನು ಬಹಳ ಚತುರತೆಯಿಂದ ಸೃಷ್ಟಿಸಿದಳು. ಆಗಸ್ಟಸ್ ಕಾಮದಾಸೆಗೆ ರೋಮ್‌ನ ಮಾರುಕಟ್ಟೆಗಳಿಂದ ಎಳೆ ವಯಸ್ಸಿನ ಚಂದದ ಹುಡುಗಿಯರನ್ನು ಆಯ್ಕೆ ಮಾಡುವುದು, ಅವರನ್ನು ಅರಮನೆಗೆ ಗುಪ್ತವಾಗಿ ಕರೆತಂದು ಆಗಸ್ಟಸ್‌ನಿಗೆ ಒಪ್ಪಿಸುವ ಕೆಲಸವನ್ನು ಮಾಡುತ್ತಿದ್ದಳು. ರಾಜಕೀಯ ಮಹಾತ್ವಾಕಾಂಕ್ಷೆ ಮತ್ತು ತನ್ನ ಮಗನನ್ನು ಸಾಮ್ರಾಟನನ್ನಾಗಿ ಮಾಡುವ ಏಕೈಕ ಗುರಿಯಿಂದ ಆಗಸ್ಟಸ್‌ನ ಆಸೆ, ದುರಾಸೆ ಎಲ್ಲದಕ್ಕೂ ಸಾಥ್ ನೀಡಿದಳು.

ಅಧಿಕಾರದಾಹವಷ್ಟೇ ಅಲ್ಲ, ಸಾಮ್ರಾಜ್ಯದ ಹಿತವೂ ಅವಳಿಗೆ ಅಷ್ಟೇ ಮುಖ್ಯವಾಗಿತ್ತು ಎನ್ನುವುದಕ್ಕೆ ಹಲವು ಸಾಕ್ಷ್ಯಗಳು ದೊರೆಯುತ್ತವೆ. ರೋಮ್ ಸಾಮ್ರಾಜ್ಯ ಅಸಮರ್ಥರ ಕೈಗೆ ಸಿಕ್ಕಬಾರದು ಎಂಬ ಕಾಳಜಿ ಅವಳಿಗಿತ್ತು. ಮಹಿಳೆಯರಿಗೆ ಪೂರಕವಾದ ಹಲವು ಕಾನೂನುಗಳು ಜಾರಿಯಾಗಲು ಲಿವಿಯಾ ಕಾರಣಳಾಗಿದ್ದಳು. ಎರಡಕ್ಕಿಂತ ಹೆಚ್ಚು ಮಕ್ಕಳಿರುವ ಮಹಿಳೆಯರಿಗೆ ಧನಸಹಾಯದ ಯೋಜನೆ ಅವಳ ಕಾಲದಲ್ಲಿಯೇ ಜಾರಿಗೆ ಬಂದಿತ್ತು. ನಗರ ಸೌಂದರ್ಯದ ಬಗ್ಗೆ ಅಪಾರ ಕಾಳಜಿ ಹೊಂದಿದ್ದಳು. ಜನರ ಹಿತರಕ್ಷಣೆಯ ಮುತುವರ್ಜಿ ವಹಿಸಿದ್ದಳು. ತನ್ನ ಮಗ ಟಿಬೆರಸ್ ಕೂಡ ಅಸಮರ್ಥ ಸಾಮ್ರಾಟನಾಗುತ್ತಾನೆ ಎಂದು ಊಹಿಸಿದ್ದಳು. ಆದರೂ ಅವನ ರಕ್ಷಣೆಗೆ ನಿಂತು, ಮಲಮಗಳು ಜೂಲಿಯಾಳ ಎರಡನೆಯ ಗಂಡ ಮತ್ತವನ ಮೂರು ಗಂಡುಮಕ್ಕಳ ಕೊಲೆಗೆ ಸಂಚು ರೂಪಿಸುತ್ತಾ ಹೋದಳು.

ಲಿವಿಯಾಳಿಗೆ ತನ್ನ ಮಗ ಟಿಬೆರಸ್‌ನನ್ನು ಪಟ್ಟಕ್ಕೇರಿಸಲು ಇದ್ದ ಅಡ್ಡಿ ಎಂದರೆ ಮಲಮಗಳು ಜೂಲಿಯಾಳ ಕುಟುಂಬ. ಆಗಸ್ಟಸ್ ಸೇನಾಧಿಕಾರಿಗಳಾಗಿದ್ದ ಮಾರ್ಕ್ಸ್ ಮತ್ತು ಅಗ್ರಿಪ್ಪ ಇಬ್ಬರು ಕೂಡ ತನ್ನ ಉತ್ತರಾಧಿಕಾರಿಗಳಾಗಲು ಸಮರ್ಥರು ಎಂದು ತಿಳಿದ ಆಗಸ್ಟಸ್ ತನ್ನ ಮಗಳು ಜೂಲಿಯಾಳ ಜೊತೆ ಮಾರ್ಕ್ಸ್‌ನನ್ನು ಮದುವೆ ಮಾಡುತ್ತಾನೆ. ಜೂಲಿಯಾ ಗರ್ಭಧರಿಸುವ ಮೊದಲೇ ಸಾಂಕ್ರಾಮಿಕ ರೋಗವೊಂದಕ್ಕೆ ಮಾರ್ಕ್ಸ್ ಬಲಿಯಾದಾಗ ಸಮಾಧಾನದ ನಿಟ್ಟುಸಿರು ಬಿಟ್ಟಳು. ಆದರೆ ಅವಳ ಸಮಾಧಾನ ಬಹಳ ಹೊತ್ತು ಇರಲಿಲ್ಲ. ಆಗಸ್ಟಸ್ ತನ್ನ ನೆಚ್ಚಿನ ಮತ್ತೊಬ್ಬ ಸೇನಾಧಿಕಾರಿ ಅಗ್ರಿಪ್ಪನನ್ನು ದತ್ತು ಪಡೆದು ವಿಧವೆಯಾದ ತನ್ನ ಮಗಳಿಗೆ ಕಟ್ಟುತ್ತಾನೆ.

ಲಿವಿಯಾ ಅಗ್ರಿಪ್ಪನನ್ನು ಕೊಲೆ ಮಾಡುವ ಸಂಚು ರೂಪಿಸುತ್ತಾಳೆ. ಈ ಅಂತರದಲ್ಲಿ ಜೂಲಿಯಾ ಮತ್ತು ಅಗ್ರಿಪ್ಪನನಿಗೆ ಐದು ಮಕ್ಕಳಾಗುತ್ತವೆ. ಒಮ್ಮೆ ಜೂಲಿಯಾ ಹಾಗೂ ಅಗ್ರಿಪ್ಪನ ತಾಯಿ ಪ್ರವಾಸಕ್ಕೆಂದು ತೆರಳಿದ ಸಂದರ್ಭದಲ್ಲಿ ಶೀತದಿಂದ ಹಾಸಿಗೆ ಹಿಡಿದ ಅಗ್ರಿಪ್ಪನಿಗೆ ಔಷಧದಲ್ಲಿ ವಿಷವಿಕ್ಕಿ ಕೊಲೆ ಮಾಡುವ ಮೂಲಕ ಲಿವಿಯಾಳ ರಕ್ತಚರಿತ್ರೆ ಶುರುವಾಗುತ್ತದೆ. ಇಷ್ಟಾದರೂ ಆಗಸ್ಟಸ್ ತನ್ನ ಮಗಳ ಕಡೆಯವರನ್ನೇ ಸಾಮ್ರಾಟನನ್ನಾಗಿ ಮಾಡುವ ಛಲ ಬಿಡದಿರುವುದನ್ನು ಕಂಡು, ತನ್ನ ಮಗ ಟಿಬೆರಸ್‌ನನ್ನು ಎರಡನೇ ಬಾರಿ ವಿಧವೆಯಾದ ಜೂಲಿಯಾಳಿಗೆ ಮದುವೆ ಮಾಡುತ್ತಾಳೆ.

ಜೂಲಿಯಾ ಮತ್ತು ಟಿಬೆರಸ್‌ಗೆ ಒಬ್ಬ ಮಗ ಜನಿಸುತ್ತಾನೆ. ಆದರೆ ಪ್ರೇಮವಿಲ್ಲದ ಅವರ ಸಂಸಾರ ತುಂಬ ದಿನ ನಡೆಯುವುದಿಲ್ಲ. ವೈಮನಸ್ಸು ವಿಪರೀತಕ್ಕೆ ಹೋದಾಗ ಆಗಸ್ಟಸ್, ಟಿಬೆರಸ್‌ನನ್ನು





ಸೌಂದರ್ಯದ ಜೊತೆಗೆ ಚಾತುರ್ಯವನ್ನು ಎರಕಹೊಯ್ದರೆ ಅದಕ್ಕೆ ಲಿವಿಯಾ ಎಂದು ಹೆಸರಿಡಬಹುದು